ದಿನಾಂಕ 08-02-2024 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಯರ ಪರ ಶ್ರೀ.ಆರ್ ಎಸ್ ಟಿ ವಕೀಲರಿಂದ :

**4.** ನನ್ನ ಪತ್ನಿಯ ಹೆಸರು ಜಾಕೀಯಾ. ಈಗ ನೋಡುತ್ತಿರುವ ದಾಖಲೆ ನನ್ನ ಪತ್ನಿಯ ಹೆಸರಿನಲ್ಲಿರುವ ಮನೆಗೆ ಸಂಬಂಧಿಸಿದ ವಿ ಪಿ ಸಿ ಉತಾರೆ ಎಂದರೆ ಸರಿ. ದಾಖಲೆಯನ್ನು ನಿ ಪಿ 8 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿಯ ಪತ್ನಿಯ ಹೆಸರು ಶಮೀನಾಬಾನು. ಈಗ ನೋಡುತ್ತಿರುವ ದಾಖಲೆ 1 ನೇ ಪ್ರತಿವಾದಿಯ ಪತ್ನಿಯ ಹೆಸರಿನಲ್ಲಿರುವ ಮನೆಗೆ ಸಂಬಂಧಿಸಿದ ವಿ ಪಿ ಸಿ ಉತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನಿ ಪಿ 9 ಎಂದು ಗುರುತಿಸಲಾಯಿತು. ನಿ ಪಿ 8 ಮತ್ತು 9 ರ ದಾಖಲೆಗಳು ಯಾವ ತಾರೀಖಿನಂದು ದಾಖಲಾಗಿವೆ ಎಂದು ಗೊತ್ತಿಲ್ಲ. ನಿ ಪಿ 8 ಮತ್ತು 9 ರ ದಾಖಲೆಗಳನ್ನು ದಿನಾಂಕ 26-5-2023 ರಂದು ನನ್ನ ಮತ್ತು 1 ನೇ ಪ್ರತಿವಾದಿಯ ಪತ್ನಿಯ ಹೆಸರಿಗೆ ದಾಖಲಿಸಲಾಗಿದೆ ಎಂದರೆ ಸರಿ. ನಿ ಪಿ 8 ಮತ್ತು 9 ರ ದಾಖಲೆಗಳನ್ನು ಈ ದಾವೆ ಚಾಲ್ತಿಯಲ್ಲಿ ಇರುವಾಗಲೇ ನಮ್ಮ ಹೆಸರಿನಿಂದ ನಮ್ಮ ಪತ್ನಿಯರ ಹೆಸರಿಗೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿ ಪಿ 8 ಮತ್ತು 9 ರ ದಾಖಲೆಗಳಲ್ಲಿರುವ ಮನೆಗಳು ಈ ದಾವೆ ಸಲ್ಲಿಸುವ ಪೂರ್ವದಲ್ಲಿಯೇ ನನ್ನ ಮತ್ತು 1 ನೇ ಪ್ರತಿವಾದಿಯ ಪತ್ನಿಯರ ಹೆಸರಿನಲ್ಲಿ ದಾಖಲಾಗಿದ್ದವು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

ಆ ಎರಡೂ ಆಸ್ತಿಗಳಿಗೆ ಸಂಬಂಧಪಟ್ಟಂತೆ ಈ ದಾವೆ ದಾಖಲಾದ ನಂತರ ನನ್ನ ಮತ್ತು 1 ನೇ ಪ್ರತಿವಾದಿಯರ ಪತ್ನಿಯರ ಹೆಸರುಗಳನ್ನು ನಾವು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆ ವಿಷಯ ನನಗೆ ಗೊತ್ತಿದ್ದರೂ ಕೂಡ ದಾವೆ ದಾಖಲಿಸುವ ಪೂರ್ವದಲ್ಲಿಯೇ ಹೆಸರು ನಮೂದಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಬಿ ಶೆಡ್ಯೂಲ ನ 4 ನೇ ಜಮೀನು 2 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ಸದರಿ ಜಮೀನನ್ನು 2 ನೇ ಪ್ರತಿವಾದಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಯಾವ ಇಸವಿಯಲ್ಲಿ ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. ಈ ದಾವೆ ದಾಖಲಿಸುವ ಕಾಲಕ್ಕೆ ಆ ಜಮೀನು 2 ನೇ ಪ್ರತಿವಾದಿಯ ಹೆಸರಿನಲ್ಲಿತ್ತು. ಅದನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. ಈಗ ನೋಡುತ್ತಿರುವ ಪಹಣಿಯ ಪ್ರಕಾರ ದಾವಾ ಬಿ ಶೆಡ್ಯೂಲ 4 ನೇ ಆಸ್ತಿಯನ್ನು 2 ನೆ ಪ್ರತಿವಾದಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಪಹಣಿಯನ್ನು ನಿ ಪಿ 10 ಎಂದು ಗುರುತಿಸಲಾಯಿತು. ವಾದಿಯರಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನಿ ಪಿ 8 ರಿಂದ 10 ರ ದಾಖಲೆಗಳನ್ನು ತೋರುಗಾಣಿಕೆಗಾಗಿ ಮಾಡಿದ್ದೇವೆ ಎಂದರೆ ಸರಿಯಲ್ಲ. ತೋರುಗಾಣಿಕೆಗಾಗಿ ಮಾಡಲಾಗಿದೆ ಎಂದು ನನಗೆ ಗೊತ್ತಿದ್ದರೂ ಕೂಡ ಆ ರೀತಿ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತ್ನಿಯ ಹೆಸರಿನಲ್ಲಿ ಸರಕಾರದಿಂದ ಮನೆ ಮಂಜೂರಾಗಿತ್ತು ಆ ಕಾರಣದಿಂದ ನಿ ಪಿ 8 ನ್ನು ಆಕೆಯ ಹೆಸರಿನಲ್ಲಿ ದಾಖಲಿಸಿದ್ದೇನೆ. ನನ್ನ ತಂದೆಯಿಂದ ಬಂದ ಆಸ್ತಿಗಳ ಬಗ್ಗೆ ನಮ್ಮೊಳಗೆ ಇಲ್ಲಿಯವರೆಗೂ ಯಾವುದೇ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮೊಳಗೆ ಯಾವುದೇ ಕಾನೂನು ಬದ್ಧ ಹಿಸ್ಸೆಯಾಗದೇ ಇದ್ದರೂ ಸಹ ಸರಕಾರದ ಸೌಲಭ್ಯ ಪಡೆಯುವ ಸಲುವಾಗಿ ನಮ್ಮ ಹೆಸರನ್ನು ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ನಮ್ಮೊಳಗೆ ಹಿಸ್ಸೆಯಾಗಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ದಾಖಲೆ ಹಾಜರುಪಡಿಸಲು ತೊಂದರೆ ಇತ್ತೇ ಎಂದರೆ ಇಲ್ಲ. ವಾದಿಯರು ಮತ್ತು ನಮ್ಮ ಮಧ್ಯ ಕಾನೂನು ಬದ್ಧ ಹಿಸೆಯಾಗದೇ ಇರುವ ಕಾರಣವೇ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ.ಎಫ್ ಬಿ ಎಮ್ ವಕೀಲರಿಂದ :</u>

( ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

<u>: ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್